**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,</u>**

**ಶ್ರೀರಂಗಪಟ್ಟಣ.**

ಸಿ.ಸಿ.: 193/2013

ಪಿ. ಡಬ್ಲ್ಯು: 07

ಸಿ. ಡಬ್ಲ್ಯು: 15

| | | |
|---|---|---|
| ಸಾಕ್ಷಿದಾರರ ಹೆಸರು | : | ಮಂಜು |
| ತಂದೆ/ಪತಿಯ ಹೆಸರು | : | ಹುಚ್ಚೇಗೌಡ |
| ವಯಸ್ಸು | : | 31 ವರ್ಷ |
| ವೃತ್ತಿ | : | ಇಂಜಿನಿಯರ್ |
| ವಾಸ | : | ಅರಕೆರೆ ಗ್ರಾಮ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕ: 27.09.2023

ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದ

ನಾನು ಸಹಿ ಮಾಡಬಲ್ಲೆ. ಸಾಕ್ಷಿ ನಿಪಿ.2 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ.2-ಸಿ ಎಂದು ಗುರುತಿಸಲಾಯಿತು. ಸುಮಾರು 7-8 ವರ್ಷಗಳ ಹಿಂದೆ ಅರಕೆರೆಯಲ್ಲಿ ಪೋಲೀಸರ ಕೋರಿಕೆ ಮೇರೆಗೆ ನಿಪಿ.2 ಕ್ಕೆ ನಾನು ಸಹಿ ಮಾಡಿದ್ದೇನೆ. ನಿಪಿ.2 ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ ಮತ್ತು ನಿಪಿ.2 ರಲ್ಲಿನ ಅಂಶಗಳನ್ನು ನನಗೆ ಓದಿ ಹೇಳಿಲ್ಲ. ನನ್ನ ಸಮಕ್ಷಮ ಪೋಲೀಸರು ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟಿ ಸವಾಲು ಅನುಮತಿ ನೀಡುವಂತೆ ಪ್ರಾರ್ಥಿಸಿದ್ದು ನೀಡಲಾಗಿದೆ)

**<u>ಪಾಟಿ ಸವಾಲು: ಮಾನ್ಯ ಸ.ಸ.ಅ ರವರಿಂದ</u>**

ದಿ: 10.12.2012 ರಂದು ಮಧ್ಯಾಹ್ನ 03.00 ಸಮಯದಲ್ಲಿ ಪಿ.ಹಳ್ಳಿ ಗ್ರಾಮದ ಕರೀಗೌಡರ ಬಾಬ್ತು ಕೊಡಿಯಾಲ ಗ್ರಾಮದಲ್ಲಿನ ಸ.ನಂ.15/1 ರ ಜಮೀನಿನಲ್ಲಿ ವಿದ್ಯುತ್ ತಂತಿ ತಗುಲಿ ಮೃತಪಟ್ಟಿದ್ದ ಆರ್.ಪ್ರಸನ್ನ ರವರ ಶವ ಬಿದಿದ್ದ ಸ್ಥಳದಲ್ಲಿ ಪೋಲೀಸರು ಮಹಜರ್ ಮಾಡಿದ್ದರು ಆ ಸಮಯದಲ್ಲಿ ನಾನು ಹಾಜರಿದ್ದು ನಿಪಿ.2 ಕ್ಕೆ ಸಾಕ್ಷಿಯಾಗಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಂಗಡ ಭಾಸ್ಕರ ಮತ್ತಿತರು ಸಹ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಪಿ.2 ಮಹಜರ್ ವೇಳೆ ನನ್ನ ಸಮಕ್ಷಮ ಪೋಲೀಸರು ತುಂಡಾಗಿ ಬಿದಿದ್ದ ವಿದ್ಯುತ್ ವೈರ್ ಅನ್ನು ವಶಪಡಿಸಿಕೊಂಡಿದ್ದರು ಎಂದರೆ ಸುಳ್ಳು.

ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ**

ಏನು ಇಲ್ಲ

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.